## ನಿಮ್ಮೊಡನೆ

# ಪ್ರತಿಮಾ ವಿಲಾಸ, ಬೇಡ ಆಭಾಸ

ಸಾರ್ವಜನಿಕ ಸ್ಥಳಗಳಲ್ಲಿ ಪ್ರತಿಷ್ಠಾಪಿಸಿದ ಪ್ರತಿಮೆಗಳನ್ನು ಯಾವುದೇ ಮುಲಾಜಿಲ್ಲದೆ ತೆರವುಗೊಳಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಸೂಚನೆ ನೀಡಿದೆ. ಸಾರ್ವಜನಿಕವಾಗಿ ಪ್ರತಿಮಾ ಪ್ರದರ್ಶನದ ಅತಿರೇಕಗಳಿಗೆ ಅಂಕುಶ ಹಾಕುವ ನಿಟ್ಟಿನಲ್ಲಿ ಹೈಕೋರ್ಟ್‌ನ ಸೂಚನೆ ಒಂದು ಮುಖ್ಯವಾದ ಹೆಜ್ಜೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬಿದಲೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಸ್ ನಿಲ್ದಾಣದಲ್ಲಿರುವ ವಾಲ್ಮೀಕಿ ಮಹರ್ಷಿ ಪ್ರತಿಮೆಯನ್ನು ತೆರವುಗೊಳಿಸುವಂತೆ ಕೋರಿ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ಸಂದರ್ಭದಲ್ಲಿ, ಪ್ರತಿಮೆಗಳ ಪ್ರತಿಷ್ಠಾಪನೆ ಕುರಿತಂತೆ ಹೈಕೋರ್ಟ್ ತನ್ನ ನಿಲುವು ವ್ಯಕ್ತಪಡಿಸಿದೆ. ಸರ್ಕಾರದ ಕ್ರಿಯಾಶೂನ್ಯತೆಯನ್ನು ಪ್ರಶ್ನಿಸಿರುವ ಹೈಕೋರ್ಟ್, ಸಾರ್ವಜನಿಕ ಸ್ಥಳಗಳಲ್ಲಿ ಜನ ಮತ್ತು ವಾಹನ ಸಂಚಾರಕ್ಕೆ ತೊಂದರೆಯಾಗುವುದರಿಂದ ಪ್ರತಿಮೆಗಳನ್ನು ಸ್ಥಾಪಿಸುವಂತಹ ಪ್ರಕರಣಗಳಿಗೆ ಅಂತ್ಯ ಕಾಣಿಸಬೇಕು ಎಂದು ಹೇಳಿದೆ.

ದೇವರ ಮೂರ್ತಿ ಅಥವಾ ಮಹಾನ್ ವ್ಯಕ್ತಿಯ ಪ್ರತಿಮೆ ಯಾವುದೇ ಆಗಿದ್ದರೂ ಸಾರ್ವಜನಿಕ ಪ್ರದೇಶದಲ್ಲಿ ಪ್ರತಿಷ್ಠಾಪನೆ ಮಾಡುವಂತಿಲ್ಲ. ಆಸಕ್ತರು ತಮ್ಮ ಸ್ವಂತ ಸ್ಥಳಗಳಲ್ಲಿ ಪ್ರತಿಮೆಗಳನ್ನು ಪ್ರತಿಷ್ಠಾಪಿಸಿಕೊಳ್ಳಲಿ ಎನ್ನುವ ಹೈಕೋರ್ಟ್ ಮಾತುಗಳನ್ನು ಪ್ರತಿಮಾಪ್ರಿಯರು ಗಂಭೀರವಾಗಿ ಪರಿಗಣಿಸಬೇಕು.

ನಗರದ ಯಾವುದೇ ಪ್ರಮುಖ ರಸ್ತೆಗೆ ಹೋದರೂ ಅಲ್ಲೊಂದು ಪ್ರತಿಮೆ ಇಣುಕುತ್ತಿರುತ್ತದೆ. ಉದ್ಯಾನಗಳಲ್ಲೂ ಪ್ರತಿಮೆಗಳ ಹಾವಳಿ ತಪ್ಪಿದ್ದಲ್ಲ. ಪ್ರತಿಮೆಗಳ ರೂಪದ ಆ ಗಣ್ಯರೆಲ್ಲ ಸಮಾಜಕ್ಕೆ ಕೊಡುಗೆ ನೀಡಿದವರೇ ಆಗಿರುತ್ತಾರೆ. ಅವರ ಕೊಡುಗೆಯನ್ನು ಸಮಾಜ ಸ್ಮರಿಸಬೇಕೆನ್ನುವುದರಲ್ಲೂ ಪ್ರಶ್ನೆಯಿಲ್ಲ. ಆದರೆ, ಈ ಪ್ರತಿಮೆಗಳು ಸಾರ್ವಜನಿಕ ಸ್ಥಳಗಳ ಪ್ರಮುಖ ಉದ್ದೇಶಕ್ಕೆ ವಿರುದ್ಧವಾಗಿರುತ್ತವೆ. ನಮ್ಮಲ್ಲಿ ರಸ್ತೆಗಳು ಮೊದಲೇ ಕಿರಿದು. ಕಾಲ್ನಡಿಗೆಯಲ್ಲಿ ನಡೆಯುವವರಿಗಿಂತಲೂ ವಾಹನಗಳಿಗೆ ಹೆಚ್ಚಿನ ಆದ್ಯತೆ ನೀಡಿ ರೂಪುಗೊಂಡಂತೆ ಕಾಣಿಸುವ ಈ ರಸ್ತೆಗಳಲ್ಲಿ ಎದ್ದುನಿಲ್ಲುವ ಪ್ರತಿಮೆಗಳು ಮೊದಲೇ ಕಿರಿದಾದ ಜಾಗವನ್ನು ಮತ್ತಷ್ಟು ಇಕ್ಕಟ್ಟುಗೊಳಿಸುತ್ತವೆ. ಇದರಿಂದಾಗಿ ಜನ ಮತ್ತು ವಾಹನ ಸಂಚಾರಕ್ಕೆ ಅಡಚಣೆಯುಂಟಾಗುತ್ತದೆ. ಆ ಕಾರಣದಿಂದಲೇ ಸಾರ್ವಜನಿಕ ಸ್ಥಳಗಳಲ್ಲಿ ಪ್ರತಿಮೆಯಾಗಲೀ ಪ್ರಾರ್ಥನಾ ಸ್ಥಳವಾಗಲೀ ಇರಕೂಡದು ಎಂದು ನ್ಯಾಯಾಲಯಗಳು ಮತ್ತೆ ಮತ್ತೆ ಹೇಳುತ್ತಿವೆ.

ಸಾರ್ವಜನಿಕ ಸ್ಥಳಗಳಲ್ಲಿ ಪ್ರತಿಮೆಗಳ ಪ್ರತಿಷ್ಠಾನೆಗೆ ಸುಪ್ರೀಂ ಕೋರ್ಟ್ ಕೂಡ ನಿರ್ಬಂಧ ಹೇರಿದೆ. ‘ಸಾರ್ವಜನಿಕ ರಸ್ತೆಗಳು ಯಾರೊಬ್ಬರ ಸ್ವಂತ ಆಸ್ತಿಯಲ್ಲ. ಸರ್ಕಾರ ಸಾರ್ವಜನಿಕ ಹಿತಾಸಕ್ತಿಯನ್ನು ರಕ್ಷಿಸಬೇಕು. ಯಾರನ್ನೋ ವೈಭವೀಕರಿಸಲು ಕಂಡಕಂಡಲ್ಲಿ ಪ್ರತಿಮೆಗಳನ್ನು ಸ್ಥಾಪಿಸುವ ಚಾಳಿಗೆ ಕಡಿವಾಣ ಹಾಕಲೇಬೇಕು’ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ. ನ್ಯಾಯಾಲಯಗಳ ಸ್ಪಷ್ಟ ಸೂಚನೆ ನಿರ್ದೇಶನಗಳ ನಂತರವೂ ಸಾರ್ವಜನಿಕ ಸ್ಥಳಗಳಲ್ಲಿ ಪ್ರತಿಮೆಗಳನ್ನು ಎಗ್ಗಿಲ್ಲದೆ ಸ್ಥಾಪಿಸಲಾಗುತ್ತಿದೆ. ಹೀಗೆ ರಸ್ತೆಗಳಲ್ಲಿ ಉದ್ಭವಗೊಳ್ಳುವ ಮೂರ್ತಿಗಳಲ್ಲಿ ಸಿನಿಮಾ ನಟರು ಹಾಗೂ ಸಮುದಾಯಗಳನ್ನು ಪ್ರತಿನಿಧಿಸುವ ಧಾರ್ಮಿಕ–ಚಾರಿತ್ರಿಕ ನಾಯಕರೇ ಹೆಚ್ಚು. ಸರ್ಕಾರ ಕೂಡ ಸಮುದಾಯಗಳನ್ನು ಓಲೈಸಲಿಕ್ಕಾಗಿ ಪ್ರತಿಮಾ ಸಂಸ್ಕೃತಿಯನ್ನು ಪೋಷಿಸುತ್ತದೆ. ಕೆಲವೊಮ್ಮೆ ಈ ಪ್ರತಿಮೆಗಳ ನಿರ್ವಹಣೆ ಸ್ಥಳೀಯ ಆಡಳಿತಕ್ಕೆ ಸವಾಲಾಗಿ ಪರಿಣಮಿಸುತ್ತದೆ. ಗಾಳಿ ಮಳೆ ಬಿಸಿಲಿಗೆ ಪ್ರತಿಮೆಗಳು ಅಂದಗೆಡುತ್ತವೆ, ನಿತ್ಯವೂ ದೂಳಿನಲ್ಲಿ ಮೀಯುತ್ತವೆ. ಪುಂಡರ ಕಿಡಿಗೇಡಿತನದಿಂದ ವಿರೂಪಗೊಳ್ಳುತ್ತವೆ. ಗಾಂಧಿ ಅಂಬೇಡ್ಕರರ ಕನ್ನಡಕಗಳು ಕಳುವಾಗುವಂಥ ಘಟನೆಗಳು ಆಗಾಗ ವರದಿಯಾಗುತ್ತಲೇ ಇರುತ್ತವೆ. ಪ್ರತಿಮೆಗಳಲ್ಲಿನ ವ್ಯಕ್ತಿಗಳ ಉಡುಪಿನ ಬಣ್ಣ ಬದಲಿಸುವ ಕಿಡಿಗೇಡಿತನವೂ ನಡೆಯುವುದಿದೆ. ಅಂಥ ಸಂದರ್ಭಗಳು ಸಾಮಾಜಿಕ ಸೌಹಾರ್ದ ಕದಡಿರುವ ಉದಾಹರಣೆಗಳಿಗೆ ಕೊನೆಮೊದಲಿಲ್ಲ.

ಪ್ರತಿಮೆಗಳನ್ನು ನಿಲ್ಲಿಸುವುದು ಅಭಿಮಾನದ ಅಭಿವ್ಯಕ್ತಿಯ ಒಂದು ವಿಧಾನ. ಆದರೆ, ಆ ಪ್ರತಿಮೆಗಳು ಸಾರ್ವಜನಿಕರಿಗೆ ತೊಂದರೆ ಕೊಡುವಂತಾಗಬಾರದು. ಹಾಗಾಗಿ, ಅಭಿಮಾನಿಗಳು ತಮಗೆ ಸೇರಿದ ಜಾಗದಲ್ಲಿ ತಮ್ಮ ಇಷ್ಟಪಾತ್ರರ ಪ್ರತಿಮೆಯನ್ನು ಪ್ರತಿಷ್ಠಾಪಿಸುವುದು ಒಳ್ಳೆಯದು. ಇದರಿಂದಾಗಿ ಅವುಗಳ ನಿರ್ವಹಣೆಯೂ ಸುಲಭವಾಗುತ್ತದೆ.

ನಾವು ಗೌರವಿಸುವ ವ್ಯಕ್ತಿಗೆ ನಿಜವಾದ ಪ್ರೀತಿ–ಅಭಿಮಾನ ವ್ಯಕ್ತಪಡಿಸುವ ಮತ್ತೊಂದು ಮಾರ್ಗವೂ ಇದೆ. ಅದು, ರಸ್ತೆಯಲ್ಲೋ ಖಾಸಗಿ ಸ್ಥಳದಲ್ಲೋ ಪ್ರತಿಮೆ ನಿಲ್ಲಿಸುವ ಬದಲು, ಎದೆಯಂಗಳದಲ್ಲಿ ಪ್ರತಿಮೆಗಳನ್ನು ಪ್ರತಿಷ್ಠಾಪಿಸಿಕೊಳ್ಳುವುದು. ಬಹಿರಂಗ ಪ್ರತಿಮೆ ಲೋಕಮೆಚ್ಚಿಸುವ ಪ್ರಯತ್ನದಲ್ಲಿ ನಡೆಸುವ ಪ್ರದರ್ಶನವಾದರೆ, ಎರಡನೆಯದು ಅಂತರಂಗವನ್ನು ಬೆಳಗಿಸುವ ಸೃಜನಶೀಲ ಪ್ರಕ್ರಿಯೆ. ಬಿಸಿಲು ಮಳೆ ದೂಳಿನ ವಿಷಗಾಳಿಗೆ ಸಿಲುಕದ ಅಂತರಂಗದ ಪ್ರತಿಮೆಯ ಆಯಸ್ಸು ಕೂಡ ದೀರ್ಘವಾದುದು. ನ್ಯಾಯಾಲಯಗಳ ಮಧ್ಯಪ್ರವೇಶಕ್ಕೆ ಅವಕಾಶ ಕೊಡದೆ, ಪ್ರತಿಮಾ ಸಂಸ್ಕೃತಿಗೆ ಸ್ವಯಂ ಅಂಕುಶ ರೂಪಿಸಿಕೊಳ್ಳುವುದು ಸದ್ಯದ ಅಗತ್ಯ. ಮಾತು ಮತ್ತು ಕೃತಿಗಳೇ ನಮ್ಮ ಅಂತರಂಗದಲ್ಲಿ ನೆಲೆ ನಿಂತ ಪ್ರತಿಮೆಗಳನ್ನು ಹೆಚ್ಚು ಸಮರ್ಥವಾಗಿ ಸಮಾಜದೆದುರು ಬಿಂಬಿಸುತ್ತವೆ.

■ ರಘುನಾಥ ಚ.ಹ.

ಪ್ರತಿಮೆಗಳನ್ನು ಬಯಲಿನ ಬದಲು ಎದೆಯಂಗಳದಲ್ಲಿ ಪ್ರತಿಷ್ಠಾಪಿಸಿಕೊಳ್ಳುವುದು ಒಳ್ಳೆಯದು. ಬಹಿರಂಗ ಪ್ರತಿಮೆ ಲೋಕಮೆಚ್ಚಿಸುವ ಪ್ರದರ್ಶನವಾದರೆ. ಒಳಗಲ ಪ್ರತಿಮೆ ಅಂತರಂಗವನ್ನು ಬೆಳಗಿಸುವ ಜೀವಜ್ಯೋತಿ. ಬಿಸಿಲು ಮಳೆಯ ಹಂಗಿಲ್ಲದ ಅಂತರಂಗದ ಪ್ರತಿಮೆಯ ಜೀವಿತಾವಧಿ ದೀರ್ಘವಾದುದು.

